## ಕಳೆದ ಸಂಚಿಕೆಯಲ್ಲಿ



ಸುನಂದಾಳ ಸಾವಿನ ದುಃಖ ಮಾಸುವ ಮುನ್ನವೇ ಬಾವನೆಂಟ ತಂದ ಮರುಮದುವೆಯ ಪ್ರಸ್ತಾಪದ ಬಗ್ಗೆ ಚಿದಾನಂದ ಉತ್ಸಾಹ ವ್ಯಕ್ತಪಡಿಸಲಿಲ್ಲ. ಆದರೆ, ಅಪ್ಪ ಮತ್ತೆ ಮದುವೆಯಾದರೆ ತಮ್ಮ ಗತಿಯೇನೆಂದು ಭಾಮ ಮನಸ್ಸಿನಲ್ಲೇ ಕೊರಗತೊಡಗಿದಳು. ಮಲತಾಯಿ ಆಗಮನದಿಂದ ತನ್ನ ಹಾಗೂ ತಮ್ಮನ ಜೀವನದ ಮೇಲೆ ಆಗಬಹುದಾದ ಪರಿಣಾಮಗಳನ್ನು ಕಲ್ಪಿಸಿಕೊಂಡಂತೆಲ್ಲ ಅವಳ ಮನಸ್ಸು ಸಣ್ಣದಾಗುತ್ತಿತ್ತು. ಮಗಳ ವರ್ತನೆಯಲ್ಲಿ ಆಗಿರುವ ಬದಲಾವಣೆ ಚಿದಾನಂದನ ಗಮನಕ್ಕೆ ಬಂದಿತಾದರೂ, ಅವಳ ಬಾಯಿ ಬಿಡಿಸಲಾಗಲಿಲ್ಲ. ಮದುವೆಯ ಪ್ರಸ್ತಾಪದ ನೆಪದಲ್ಲಿ ಮತ್ತೆ ಬಂದ ಬಾವನೆಂಟ ಮರು ಮದುವೆಯಿಂದಾಗಿ ಚಿದಾನಂದನಿಗೂ ಅವನ ಮಕ್ಕಳಿಗೂ ಆಗಬಹುದಾದ ಅನುಕೂಲಗಳನ್ನು ಬಿಡಿಸಿ ಬಿಡಿಸಿ ಹೇಳತೊಡಗಿದ. ಮಾವನ ಮಾತುಗಳಿಗೆ ಅಪ್ಪ ಎಲ್ಲಿ ಕರಗಿಹೋಗುವರೋ ಎಂದು ಭಾಮ ಆತಂಕಗೊಂಡಳು. ಕುಟುಂಬದಲ್ಲಿ ಅನಿರೀಕ್ಷಿತ ಬಿಕ್ಕಟ್ಟಿಗೆ ಕಾರಣನಾದ ಮಾವನ ಬಗ್ಗೆ ಹಾಗೂ ಮಾತನ್ನು ಲಂಬಿಸುತ್ತಿದ್ದ ಅಪ್ಪನ ಬಗ್ಗೆ ಅವಳು ಕೋಪಗೊಂಡರೂ, ಅಪ್ಪನ ನಿರ್ಧಾರದ ಬಗ್ಗೆ ಮೈಯೆಲ್ಲ ಕಿವಿಯಾಗಿ ಕಾಯತೊಡಗಿದಳು.

ಭಾರ್ಗವ. ಮಗಳು ಮುಂದೇನು ಓದಬೇಕು ಎನ್ನುವುದನ್ನು ಅವಳ ಆಯ್ಕೆಗೆ ಬಿಟ್ಟುಕೊಟ್ಟಿದ್ದ ಚಿದಾನಂದ. 'ಬಿ.ಎ.ಗೆ ಸೇರ್ಕೋತೀನಿ ಅಪ್ಪಾ, ಆಮೇಲೆ ಇಂಗ್ಲಿಷ್ ಎಂ.ಎ. ಮಾಡ್ಕೋತೀನಿ' ಅಂದಳು ಮುದ್ದಿನ ಮಗಳು.

'ನಿನ್ನಿಷ್ಟ...' ಅಂದ ಚಿದಾನಂದ.

ಬೆಂಗಳೂರಿಗೆ ಸಂಸಾರ ವಾಪಸು ಬರುತ್ತಿದ್ದಂತೆ ಮನೆ ಕೊಳ್ಳುವ ಸಂದರ್ಭ ಒದಗಿ ಬಂದಿದ್ದು ಒಂದು ಯೋಗಾಯೋಗ. ಮನೆಯನ್ನು ಆಧಾರವಾಗಿಟ್ಟು ದೊಡ್ಡ ಮೊತ್ತದ ಸಾಲ ಪಡೆದಿದ್ದ ಉದ್ಯಮಿಯೊಬ್ಬರು ವ್ಯವಹಾರದಲ್ಲಿ ನಷ್ಟ ಅನುಭವಿಸಿ ಮನೆ ಹರಾಜಾಗುವ ಪ್ರಸಂಗ ಬಂದಿತ್ತು. ಇನ್ನು ಇಲ್ಲೇ ಬೇರೆ ಬೇರೆ ಶಾಖೆಗೆ ವರ್ಗ ಮಾಡಿಸಿಕೊಳ್ಳುವುದು, ಅಥವಾ ಓಡಾಡುವಂತಹ ಹತ್ತಿರದ ಸ್ಥಳಗಳಿಗೆ ಎಂದು ನಿರ್ಧಾರ ಮಾಡಿಕೊಂಡಿದ್ದ ಚಿದಾನಂದ. ಕಡಿಮೆ ಬಡ್ಡಿಯಲ್ಲಿ ಸಾಲ ಮಂಜೂರಾಗುವ ಅನುಕೂಲತೆ ಇದ್ದು ಬೇಕಾದ ಹಣ ಹೊಂದಿಸುವುದು ಚಿದಾನಂದನಿಗೆ ದೊಡ್ಡ ಸಂಗತಿಯಾಗಿರಲಿಲ್ಲ.

'ಹರಾಜಾಗ್ತಿರೋ ಮನೆ. ಅಲ್ಲಿದ್ದೋರು ಉದ್ಧಾರ ಆಗದೆ ಬಿಟ್ಟು ಹೋಗ್ತಿದಾರೆ. ಅಂಥಾದ್ದಕ್ಕೆ ಯಾಕೆ ದುಡ್ಡು ಸುರೀತೀರಿ? ಕಾಣ್ತಿಲ್ವಾ, ಮೂರು ರಸ್ತೆ ಕೂಡೋ ಜಾಗದಲ್ಲಿದೆ ಮನೆ. ಅದಕ್ಕೇ ಹಾಗಾಗಿದ್ದು...' ಕಿವಿ ಊದಿದ ಹಿತೈಷಿಗಳಿದ್ದರು. ಚಿದಾನಂದನಿಗೆ ಈ ಕುರಿತು ನಂಬಿಕೆ ಇರಲಿಲ್ಲ. ಜಾತಕ ಅಂತ ಚೆನ್ನಾಗಿ ಕೂಡಿ ಬರುತ್ತಿದ್ದ ತಮ್ಮ ಮದುವೆಯ ಕತೆ ಏನಾಯ್ತು? ಎಲ್ಲಾ ಮನುಷ್ಯರ ಭ್ರಮೆ. ಭವಿಷ್ಯ ಗೊತ್ತಿಲ್ಲದೆ ದೇವರ ಮೇಲೆ ಭಾರ ಹಾಕಲು ಯಾವುದಕ್ಕೋ ಮೊರೆ ಹೋಗಿ ಸಮಾಧಾನ ಕಂಡುಕೊಳ್ಳುವ ಪ್ರಯತ್ನ. ಏನಾಗಬೇಕು ಅಂತಿರುತ್ತೋ ಅದು ಆಗೇ ಆಗುತ್ತೆ. ಮುಖ್ಯ ನಮ್ಮಲ್ಲಿ ನಮಗೆ ನಂಬಿಕೆ ಇರಬೇಕು ಎನ್ನುತ್ತಾ ಗಟ್ಟಿ ಮನಸ್ಸು ಮಾಡಿದ ಚಿದಾನಂದ. ಅಂಥದ್ದೊಂದು ಬಡಾವಣೆಯಲ್ಲಿ ಅಷ್ಟೊಳ್ಳೇ ಮನೆ ಕೈಗೆಟುಕುವ ದರಕ್ಕೆ ಸಿಗುವುದು ಕಷ್ಟ ಎನ್ನುವ ವಾಸ್ತವಪ್ರಜ್ಞೆ ಅವನಲ್ಲಿ ಇದ್ದೇ ಇತ್ತು.

* * *

ಗೃಹಪ್ರವೇಶ ಎಂದು ಅದ್ದೂರಿ ಕಾರ್ಯಕ್ರಮ ಇಟ್ಟುಕೊಳ್ಳಲಿಲ್ಲ ಚಿದಾನಂದ. ಅಂತಹ ತಯಾರಿಗೆ ಬೇಕಾದ ಮನೋಸ್ಥಿತಿ ಕೂಡಾ ಅವನಿಗಿರಲಿಲ್ಲ. ಬಾಯಿ ಬಿಟ್ಟು ಹೇಳದೆಯೂ ಅವನಲ್ಲಿ ಒಂದು ನೋವು ಇದ್ದೇ ಇತ್ತು, ಬಾವನೆಂಟ ಸಂಬಂಧ ಕಡಿದುಕೊಂಡ ನೋವು. ಅಪ್ಪ, ಅಮ್ಮನನ್ನು ಮದುವೆಗೆ ಮುಂಚೆಯೇ ಕಳೆದುಕೊಂಡಿದ್ದವನಿಗೆ ಅವನ ಪೈಕಿಯವರು ಎನ್ನುವ ಆಪ್ತಬಳಗ ಇರಲಿಲ್ಲ. ಮದುವೆಯ ಹೊತ್ತಿಗೆ ಹಳ್ಳಿ ಊರಿನಲ್ಲಿದ್ದ ಒಂದಿಷ್ಟು ಜಮೀನನ್ನು ಮಾರಿ ಅದರಲ್ಲಿ ಭಾವಿಪತ್ನಿಗೆ ಸ್ವಲ್ಪ ಚಿನ್ನ ಖರೀದಿಸಿದ್ದ. ಉಳಿದ ಸಣ್ಣ ಮೊತ್ತವನ್ನು ಅನಿವಾರ್ಯ ಅಗತ್ಯಗಳಿಗೆಂದು ಬ್ಯಾಂಕಿನಲ್ಲಿ ಠೇವಣಿಯಾಗಿರಿಸಿದ್ದ. 'ಅನಿವಾರ್ಯ ಅಗತ್ಯ' ಎಂದು ಅವನು ಯಾವ ಗಳಿಗೆಯಲ್ಲಿ ನಿಶ್ಚಯಿಸಿಕೊಂಡಿದ್ದನೋ, ಅನಿವಾರ್ಯಕ್ಕೇ ಖರ್ಚು ಮಾಡಬೇಕಾಗಿ ಬಂದಿತ್ತು. ಸುನಂದೆ ಕಾಯಿಲೆ ಬಿದ್ದಾಗ ಕಾಪಿಟ್ಟಿದ್ದೆಲ್ಲಾ ಖಾಲಿಯಾಗಿ ಜೊತೆಗೆ ಸಾಲ ಕೂಡಾ ಮಾಡಬೇಕಾದ ಪರಿಸ್ಥಿತಿ ಬಂದೊದಗಿತ್ತು. ದೆಹಲಿಯಲ್ಲಿದ್ದ ಮೂರು ವರ್ಷ ಅವನು ಉಳಿತಾಯದ ಕಡೆ ಹೆಚ್ಚು ಗಮನ ಕೊಟ್ಟಿರಲಿಲ್ಲ. ಮಕ್ಕಳ ಸಂತೋಷವನ್ನು ತನ್ನದಾಗಿಸಿಕೊಂಡು ಕೈ ಬಿಚ್ಚಿ ಖರ್ಚು ಮಾಡಿದ್ದ.

ಈಗ ಬೆಂಗಳೂರಿಗೆ ಬರುತ್ತಿದ್ದಂತೆ ಮನೆ ಖರೀದಿಯ ಅವಕಾಶ. ತಿಂಗಳ ಸಂಬಳದಲ್ಲಿ ಸಾಲಕ್ಕೆ ಮುರುಗಡೆಯಾಗಿ ಕೈ ಸೇರುವ ಮೊತ್ತ ನಗಣ್ಯವಾದದ್ದೇನಲ್ಲ. ಮೂರು ಜನರ ಮಿತ ಪರಿವಾರಕ್ಕೆ ಬೇಕಾದಷ್ಟಾಗುತ್ತಿತ್ತು. ಬ್ಯಾಂಕಿನಿಂದ ಅವನಿಗೆ ಸಿಗುತ್ತಿದ್ದ ಅನೇಕ ಸೌಲಭ್ಯಗಳು ಅವನ ಖರ್ಚಿನ ಬಹುಪಾಲನ್ನು ಕಡಿತಗೊಳಿಸಿ ಕೈಯಲ್ಲಿ ಹಣ ಒಟ್ಟಾಗುವಂತೆ ಮಾಡಿದ್ದವು. ಇತ್ತ ಮಗಳು ಕೂಡಾ ದುಬಾರಿಯ ಓದಿನ ಬೆನ್ನು ಬೀಳಲಿಲ್ಲ. ಅವಳು ಯಾವುದನ್ನು ಇಚ್ಛೆಪಟ್ಟಿದ್ದರೆ ಅದನ್ನು ಓದಿಸಲು ಚಿದಾನಂದ ಸಿದ್ಧನಾಗಿದ್ದರೂ ಯಾಕೋ ಹುಡುಗಿ ಸುಲಭ ಖರ್ಚಿನ ದಾರಿಯನ್ನು ಕಂಡುಕೊಂಡಳು. ಈ ಕುರಿತು ಚಿದಾನಂದನಿಗೆ ನಿರಾಶೆ ಏನಿರಲಿಲ್ಲ. ಮಗನನ್ನು ಕೂಡಾ ಅವನು ಹೋದ ದಾರಿಗೆ ಬಿಟ್ಟುಕೊಡಬೇಕೆಂದು ಅವನು ನಿಶ್ಚಯಿಸಿಯಾಗಿತ್ತು. ವಾಸ್ತವ ಗೊತ್ತಿದೆ ಅವನಿಗೆ. ತನ್ನ ಮಕ್ಕಳು ತನ್ನಂತಲ್ಲ, ಅಮ್ಮನಂತೆ. ತೀರಾ ಬುದ್ಧಿವಂತರಲ್ಲ. ದಡ್ಡರೂ ಅಲ್ಲ. ಮಧ್ಯಮಕ್ಕೆ ಸೇರಿದವರು. ಭಾಮನಿಗೆ ಒಂದು ವಿನಾಯಿತಿ ಇತ್ತು. ಎಳೆವಯಸ್ಸಿನಲ್ಲಿ ಮನೆಯ ಪಾರುಪತ್ಯ ವಹಿಸಿಕೊಳ್ಳಬೇಕಾದ ಅನಿವಾರ್ಯ ಅವಳ ನಿಶ್ಚಿಂತೆಯ ಓದಿಗೆ ಅಡ್ಡಗಾಲು ಹಾಕಿರಬಹುದಾದ ಸಾಧ್ಯತೆ ಇತ್ತು. ಆದರೆ ಭಾರ್ಗವನಿಗೆ ಅಂತಹ ಅಡ್ಡಿ ಇರಲಿಲ್ಲ. ಆರಕ್ಕೇರದಂತೆ, ಮೂರಕ್ಕಿಳಿಯದಂತೆ ಫಸ್ಟ್ ಕ್ಲಾಸಿನಲ್ಲಿ ಪಾಸಾಗುತ್ತಿದ್ದಾನೆಂಬುದಷ್ಟೇ ಸಮಾಧಾನದ ವಿಷಯ.

'ಯಾಕೋ? ಜಿತವಾಗಿ ಕೂತ್ಗೊಂಡು ಓದೋಕೆ ನಿನಗೇನಾಗಿದೆ ಧಾಡಿ?' ಎಂದು ಆಕ್ಷೇಪಣೆ ಮಾಡಿದವನಲ್ಲ ಚಿದಾನಂದ. ಪರೀಕ್ಷೆಯಲ್ಲಿ ಹೋಗಲಿ, ಟೆಸ್ಟಿನಲ್ಲಿ ಕಡಿಮೆ ಅಂಕ ಬಂದಿತೆಂದು, ಮನೆಯಲ್ಲಿ ನಿಂದಿಸಿದರೆಂದು, ಕೈಯಾರೆ ಜೀವ ತೆಗೆದುಕೊಂಡ, ಮನೆ ಬಿಟ್ಟು ಕಾಣೆಯಾದ ಮಕ್ಕಳ ವರ್ತಮಾನಗಳು ಅಲ್ಲೊಂದಿಲ್ಲೊಂದು ಕೇಳಿ ಬರುತ್ತಿದ್ದ ಕಾಲ. 'ತಬ್ಬಲಿ ಮಕ್ಕಳು. ಅವರನ್ನು ಬೈಯಬಾರದು' ಎನ್ನುವುದು ಚಿದಾನಂದನ ಆಳ ಮನಸ್ಸಿನಲ್ಲಿ ಅಚ್ಚೊತ್ತಿಬಿಟ್ಟಿತ್ತು. ಮಕ್ಕಳ ಕೈಖರ್ಚಿಗೆಂದು ತಿಂಗಳಿಗೆ ಒಂದು ಸಣ್ಣ ಮೊತ್ತವನ್ನು ಕೊಡಮಾಡುತ್ತಿದ್ದ ಚಿದಾನಂದ. ಹೋಟೆಲಿನಲ್ಲಿ ಏನಾದರೂ ತಿನ್ನಲೆಂದು, ಸಿನಿಮಾ ನೋಡಲೆಂದು, ಸಹಪಾಠಿಗಳೊಡನೆ ಸುತ್ತಾಡಲಿಕ್ಕೆಂದು ಕೊಡುತ್ತಿದ್ದ ಹಣ. ಅದರ ಲೆಕ್ಕ ಅವನಿಗೆ ಒಪ್ಪಿಸಬೇಕಾದ್ದಿರಲಿಲ್ಲ. ದೊಡ್ಡ ಖರ್ಚಿಗೆ ಅಂದರೆ ಬಟ್ಟೆಬರೆ ಇತ್ಯಾದಿ ಅಗತ್ಯಗಳಿಗೆ ಅವನು ಮಕ್ಕಳ ಜೊತೆ ಹೋಗಿ ಅವರ ಕಣ್ಣಿಗೆ ರಂಜಿಸಿದ್ದನ್ನು ತೆಗೆಸಿ ಕೊಡುತ್ತಿದ್ದ. ದುಡ್ಡಿನ ಮುಖ ನೋಡುತ್ತಿರಲಿಲ್ಲ. ಅಪ್ಪನ ಧಾರಾಳತನವನ್ನು ಭಾಮ ದುರುಪಯೋಗಪಡಿಸಿಕೊಳ್ಳುತ್ತಿರಲಿಲ್ಲ. ಬೆಲೆ ವಿಚಾರಿಸಿಯೇ ಬಟ್ಟೆ ಖರೀದಿಸುವ ಅಭ್ಯಾಸ ತಾಯಿಯಿಂದ ರಕ್ತಗತವಾಗಿ ಬಂದಿತ್ತೇನೋ ಎನ್ನುವಂತೆ ತೀರಾ ದುಬಾರಿಯದಕ್ಕೆ ಆಸೆಪಡುತ್ತಿರಲಿಲ್ಲ. ಆದರೆ ಭಾರ್ಗವನ ವಿಷಯದಲ್ಲಿ ಇದೇ ಮಾತು ಹೇಳುವಂತಿರಲಿಲ್ಲ. ಅಕ್ಕ ಮನೆಯಲ್ಲಿ ಅಡುಗೆ ಮಾಡಿಟ್ಟುಕೊಂಡು ಕಾಯುತ್ತಿದ್ದರೆ ಅವನು ಗೆಳೆಯರ ಪಟಾಲಂ